ಬಾಗಿಲು ಬಡಕ್ಕನೆ ತೆರೆದುಕೊಂಡಿತು. ಆ ಶಬ್ದಕ್ಕೆ ಎಚ್ಚೆತ್ತ ಜಯಂತಿ ಬಾಗಿಲ ಬಳಿ ಕಾಣಿಸಿಕೊಂಡ ರಾಯರನ್ನು ನೋಡಿ ಆಶ್ಚರ್ಯದಿಂದ 'ಏನಾಯಿತು ಅಣ್ಣ?' ಎಂದಳು.

ರಾಯರು 'ಯಾಕೋ ವಿಪರೀತ ತಲೆನೋವು ಜಯಂತಿ! ಸ್ವಲ್ಪ ಜ್ವರ ಬಂದ ಹಾಗೂ ಕಾಣುತ್ತದೆ. ವಾಕರಿಕೆಯೂ ಇದೆ' ಎಂದು ಹೇಳುತ್ತಿದ್ದ ಹಾಗೆ ಸಣ್ಣಗೆ ತಲೆ ತಿರುಗಿದಂತಾಗಿ ಕುಸಿದು ಕುಳಿತರು. ಜಯಂತಿ ಗಾಬರಿಯಿಂದ 'ಅಣ್ಣ ಅಣ್ಣ' ಎನ್ನುತ್ತಾ ಇವರನ್ನು ಹೇಗೆ ಹಿಡಿದೆತ್ತುವುದು ಎಂದುಕೊಂಡು, 'ನೀವು ಗೋಡೆಗೆ ಒರಗಿ ಕುಳಿತುಕೊಳ್ಳಿ. ಪಕ್ಕದ ಮನೆ ರಾಜಾರಾಂ ಅವರು ನಿಮ್ಮೂರಿನವರೇ. ಅವರನ್ನು ಕರೆಯುತ್ತೇನೆ' ಎಂದು ಅವಸರ ಅವಸರವಾಗಿ ಮನೆಯ ಬಾಗಿಲು ತೆರೆದು ಕ್ಷಣಾರ್ಧದಲ್ಲಿ ಪಕ್ಕದ ರಾಜಾರಾಂ ಅವರನ್ನು ಕರೆಸಿಕೊಂಡಳು.

ಗೋಡೆಗೆ ಒರಗಿ ಕುಳಿತ ರಾಯರಿಗೆ ಇಡೀ ಲೋಕವೇ ಸಣ್ಣಗೆ ತಿರುಗುತ್ತಿರುವ ಅನುಭವವಾಗತೊಡಗಿತು. ಯಾವ ಕಾಯಿಲೆಯೂ ಇಲ್ಲ ಎಂದು ನಾಲ್ಕು ತಿಂಗಳ ಹಿಂದೆ ತಜ್ಞರು ಮೆಚ್ಚುಗೆ ಸೂಚಿಸಿದ ಮೇಲೂ ಇದೇನು ಈಗ ತನ್ನಲ್ಲಿ ಕಾಣಿಸಿಕೊಂಡದ್ದು? ಬ್ಲಡ್ ಪ್ರೆಶರ್ ಇರಬಹುದೇ? ಎಂದು ರಾಯರು ಚಿಂತಿಸತೊಡಗುವಷ್ಟರಲ್ಲಿ ರಾಯರನ್ನು ಬಲವಾದ ಎರಡು ಕೈಗಳು ಹಿಡಿದು ಮೇಲೆತ್ತಿದಂತಾಯಿತು. ರಾಯರು ಕಣ್ಣು ತೆರೆಯದೆ ಆ ಎರಡು ಕೈಗಳ ಆಧಾರದಲ್ಲೇ ಎದ್ದು ನಿಂತರು.

ರಾಜಾರಾಂ ಅವರು ಜಯಂತಿಯಲ್ಲಿ 'ಇವರನ್ನು ಈಗ ಹಾಸಿಗೆಯಲ್ಲಿ ಮಲಗಿಸೋಣ. ನೀವು ತಕ್ಷಣ ಅಂಬುಲೆನ್ಸಿಗೆ ಫೋನು ಮಾಡಿ ಅಥವಾ ನಾನು ನಮ್ಮ ಫ್ಯಾಮಿಲಿ ಡಾಕ್ಟರ್ ಹುಬ್ಲೀಕರ್ ಅವರನ್ನು ಕರೆಸುತ್ತೇನೆ' ಎಂದರು.

ರಾಯರಿಗೆ 'ಅದೆಲ್ಲ ಬೇಡ' ಎಂದು ಹೇಳಬೇಕೆನಿಸಿದರೂ ಅವರಿಗೆ ಹೇಳಲಾಗದೆ ಹೋಯಿತು. ಅವರು ರಾಜಾರಾಂ ಅವರ ಕೈಗಳ ಆಶ್ರಯದಲ್ಲೇ ಹೆಜ್ಜೆ ಇಡುತ್ತಾ ತಾನು ಮಲಗಿದ್ದ ಬೆಡ್‌ನ ಕಡೆಗೆ ಬಂದಾಗ 'ವಾಂತಿ ಆಗುತ್ತದೆ, ವಾಂತಿ ಆಗುತ್ತದೆ' ಎಂಬಂತಾಗಿ ಅದನ್ನು ಹೇಳಬೇಕೆನ್ನುವಷ್ಟರಲ್ಲಿ ವಾಂತಿಯೂ ಆಗಿಬಿಟ್ಟಿತು.

ಜಯಂತಿ 'ಅಯ್ಯೋ ರಾಮ' ಎನ್ನುತ್ತಾ ಒಳಗೆ ಓಡಿ ಹೋಗಿ ಮತ್ತೆ ವಾಂತಿಯಾದರೆ ಇರಲಿ ಎಂಬಂತೆ ಒಂದು ಬಕೆಟನ್ನು ಹಿಡಿದುಕೊಂಡು ಬಂದಳು. 'ರಾಜಾರಾಮರೇ, ನೀವು ಅವರನ್ನು ಹಿಡಿದಿಟ್ಟುಕೊಳ್ಳಿ. ನಾನು ಅವರು ತನ್ನ ಮೈಮೇಲೆ ಮಾಡಿಕೊಂಡ ವಾಂತಿಯನ್ನೆಲ್ಲ ಕ್ಲೀನ್ ಮಾಡುತ್ತೇನೆ' ಎಂದು ರಾಯರ ಮೈ ಕೈಯಲ್ಲಿದ್ದ ವಾಂತಿಯನ್ನು ಕ್ಲೀನ್ ಮಾಡತೊಡಗಿದಳು. ರಾಯರು 'ಸ್ವಾರಿ ಜಯಂತಿ. ನನಗೆ ಹೀಗೆ ಆಗುತ್ತದೆ ಎಂಬ ಕಲ್ಪನೆಯೇ ಇರಲಿಲ್ಲ!' ಎಂದು ಮುಜುಗರಪಟ್ಟುಕೊಂಡರು. ಆಮೇಲೆ ರಾಜಾರಾಮರ ಕಡೆ ತಿರುಗಿ, 'ನೀವು ಕೈ ಬಿಡಿ ಸರ್, ನಾನು ಮೆಲ್ಲನೆ ಮಲಗುತ್ತೇನೆ' ಎನ್ನುತ್ತಾ ಹಾಸಿಗೆಯಲ್ಲಿ ಬಿದ್ದುಕೊಂಡರು.

ತಕ್ಷಣ ರಾಜಾರಾಂ ಅವರು ಜಯಂತಿಯಲ್ಲಿ 'ನೀವು ನನ್ನ ಪ್ರಶ್ನೆಗೆ ಉತ್ತರಿಸಲೇ ಇಲ್ಲ ಅಕ್ಕ. ನಾವೀಗ ಅಲರ್ಟ್ ಆಗಬೇಕು. ನಮ್ಮ ಫ್ಯಾಮಿಲಿ ಡಾಕ್ಟರನ್ನು ಕರೆಸಲೇ ಹೇಗೆ?' ಎಂದು ಮತ್ತೆ ಪ್ರಶ್ನಿಸಿದರು. ಆದರೆ ರಾಯರು 'ಇಲ್ಲಣ್ಣ ಬೇಡ. ಒಂದರ್ಧ ಗಂಟೆ ಬಿಟ್ಟು ಬೇಕಾದರೆ ಕಳುಹಿಸಿ, ಖಂಡಿತ ನಾನು ಚೇತರಿಸುತ್ತೇನೆ. ಗಾಬರಿ ಪಡಬೇಡಿ' ಎಂದರು.

ಜಯಂತಿ 'ನೋ ನೋ, ಈಗ ನಾವು ನಿಮ್ಮ ಸಜೆಶನ್ ಕೇಳುವ ಸ್ಥಿತಿಯಲ್ಲಿಲ್ಲ ಅಣ್ಣ. ನಾವು ಹೇಳಿದ್ದನ್ನು ಈಗ ನೀವು ಕೇಳಲೇಬೇಕು' ಎಂದು ಹೇಳುತ್ತಾ, 'ರಾಜಾರಾಂ ಸರ್, ನೀವು ನಿಮ್ಮ ಫ್ಯಾಮಿಲಿ ಡಾಕ್ಟರಿಗೆ ಫೋನು ಮಾಡಿ' ಎಂದಳು.

ರಾಜರಾಂ ಅವರು ಅಲ್ಲಿಂದಲೇ ತಮ್ಮ ಫ್ಯಾಮಿಲಿ ಡಾಕ್ಟರಿಗೆ ಫೋನು ಮಾಡಿ 'ಒಂದರ್ಧ ಗಂಟೆಯಲ್ಲಿ ಡಾಕ್ಟರ್ ಬರುತ್ತಾರೆ' ಎಂದರು. ಅಷ್ಟರಲ್ಲಿ ಜಯಂತಿ ಮುಖಮಾರ್ಜನ ತೀರಿಸಲು ಮುಂದಾದಳು. ರಾಜಾರಾಂ ಮತ್ತು ಜಯಂತಿ ಇಬ್ಬರೂ ಇದಿರು ಬದಿರು ಕುರ್ಚಿ ಹಾಕಿಕೊಂಡರು. ರಾಯರು ಮಲಗಿದ್ದ ಬೆಡ್ಡಿನ ಇದಿರೇ ಕುಳಿತು ಡಾಕ್ಟರ್ ಬರುವುದನ್ನು ಕಾಯತೊಡಗಿದರು.

ರಾಯರು ನಿಧಾನವಾಗಿ ಮಾತನಾಡಲು ಪ್ರಾರಂಭಿಸಿ, 'ವಾಂತಿ ಆದ ಮೇಲೆ ತಲೆನೋವು ಸ್ವಲ್ಪ ಕಡಿಮೆ ಆಗಿದೆ ಜಯಂತಿ. ಇನ್ನು ಉಳಿದದ್ದು ಜ್ವರ ಮಾತ್ರ. ಅದೇನೂ ಗಾಬರಿಯದ್ದಲ್ಲ. ಸಂಜೆಯಾಗುವಾಗ ಕಡಿಮೆಯಾದೀತು. ಅವಸರದಲ್ಲಿ ಡಾಕ್ಟರನ್ನು ಯಾಕೆ ಕರೆಯುತ್ತಿದ್ದೀರಿ?' ಎಂದು ಪ್ರಶ್ನಿಸಿದರು.

ಸ್ವಲ್ಪ ಹೊತ್ತಿನಲ್ಲಿ ಬಂದ ಡಾ. ಹುಬ್ಲೀಕರ್ ರಾಯರನ್ನು ಪೂರ್ತಿಯಾಗಿ ಪರೀಕ್ಷಿಸಿ 'ಗಾಬರಿ ಪಡುವಂಥದ್ದು ಏನೂ ಆಗಿಲ್ಲ ಮೇಡಂ. ವಾಂತಿಯಾದದ್ದು ತಲೆನೋವಿನಿಂದಲೇ. ಜ್ವರವೂ ಅಷ್ಟೇ, ಅದು ವೈರಸ್ಸಿನಿಂದ ಬಂದಿರಬಹುದು. ಕಂಪ್ಲೀಟ್ ಎರಡು ದಿನಗಳ ರೆಸ್ಟಲ್ಲಿ ಇವರು ಸರಿ ಹೋಗುತ್ತಾರೆ' ಎಂದು ಔಷಧದ ಚೀಟಿ ಬರೆದುಕೊಟ್ಟು ತೆರಳಿದರು.

ರಾಜಾರಾಂ ಅವರು 'ಜಯಂತಿಯಕ್ಕ, ನೀವು ನಿಮ್ಮ ಮನೆಯ ಕೆಲಸಕ್ಕೆ ಹೊರಡಿ. ನಾನು ಈಗಲೇ ಮೆಡಿಕಲ್‌ನಿಂದ ಔಷಧ ತಂದುಕೊಡುತ್ತೇನೆ' ಎಂದು ಮೇಲೆದ್ದರು.

ಜಯಂತಿ 'ಅಣ್ಣ, ನೀವು ಮಲಗಿಯೇ ಇರಿ. ನಾನು ನಿಮಗೂ ನನಗೂ ಟೀ ಮಾಡಿ ತರುತ್ತೇನೆ. ಆಮೇಲೆ ನೀವು ಮಾಡಿದ ವಾಂತಿ ನನ್ನ ಬಟ್ಟೆಯ ಮೇಲೆ ಆದದ್ದನ್ನು ವಾಶ್ ಮಾಡುತ್ತಲೇ ಸ್ನಾನ ತೀರಿಸಿ ಬರುತ್ತೇನೆ' ಎಂದು ಮೇಲೆದ್ದಳು.

ರಾಯರು ಮಲಗಿದ್ದಲ್ಲಿಂದಲೇ ಎರಡೂ ಕೈ ಜೋಡಿಸಿ 'ವೆರಿ ವೆರಿ ಸ್ವಾರಿ ಜಯಂತಿ. ನನಗೆ ಹೀಗೆ ಯಾವತ್ತೂ ಆದದ್ದಿಲ್ಲ. ತುಂಬಾ ಬೇಸರವಾಗುತ್ತಿದೆ, ನಿನ್ನಿಂದ ಸೇವೆ ಮಾಡಿಸಿಕೊಳ್ಳಲು' ಎನ್ನುತ್ತಾ ಮತ್ತೆ, 'ಸ್ವಾರಿ ಸ್ವಾರಿ' ಎಂದು ಎರೆಡೆರಡು ಬಾರಿ ಹೇಳಿದರು.

ಜಯಂತಿ 'ಛೆ! ಛೆ! ನೀವು ಹಾಗೆಲ್ಲ ಸಾರಿ ಕೇಳುವ ಅವಶ್ಯಕತೆ ಇಲ್ಲ ಅಣ್ಣಾ. ಕಾಯಿಲೆ ಅಂದರೆ ಹಾಗೇ. ಯಾವಾಗ ಬರುತ್ತದೆ? ಏನಾಗುತ್ತದೆ ಎಂದು ಗೊತ್ತಿರುವುದಿಲ್ಲ. ಅದರಲ್ಲಿ ನೀವು ಕ್ಷಮೆ ಕೇಳುವಂತದ್ದೇನಾಗಿದೆ ಈಗ? ಬಿಟ್ಟು ಬಿಡಿ ಆ ವಿಚಾರ' ಎನ್ನುತ್ತಾ ರಾಯರ ಹತ್ತಿರ ಬಂದು ಅವರ ತಲೆಗೂದಲನ್ನು ನೇವರಿಸಿ, 'ಡೋಂಟ್ ವರಿ' ಎಂದು ಒಳನಡೆದಳು.

ಜಯಂತಿ ಟೀ ಹಿಡಿದುಕೊಂಡು ಬಂದು, ರಾಯರ ಇದಿರಿಗೆ ಇದ್ದ ಟೀಪಾಯಿಯಲ್ಲಿ ಇಟ್ಟು 'ನೀವು ಎದ್ದು ಕುಳಿತುಕೊಳ್ಳುವುದಾದರೆ ನಾನು ಸಪೋರ್ಟ್ ಮಾಡುತ್ತೇನೆ. ನಿಮ್ಮ ಕೈಗೆ ನಾನು ಬಲ ಕೊಡಲೇ ಅಥವಾ ನಿಮ್ಮ ಬೆನ್ನಿಗೇ ಸಪೋರ್ಟು ಮಾಡಲೇ?' ಎಂದು ಪ್ರಶ್ನಿಸಿದಳು.

ರಾಯರು 'ನೋ ನೋ, ಅದೆಲ್ಲ ಬೇಡ ಜಯಂತಿ. ಈಗ ಅಷ್ಟು ಸುಸ್ತಿಲ್ಲ. ನಾನು ಏಳುತ್ತೇನೆ ಬಿಡು' ಎಂದು ನಿಧಾನವಾಗಿ ಎದ್ದು ಕುಳಿತರು. ಆಮೇಲೆ ಯಾಕೋ ಟೀ ಬೇಡ ಎನ್ನುವಂತೆ, 'ನೀನು ಟೀ ಮಾಡಿದ್ದಿ ಎಂದು ನಾನು ಈಗ ಕುಡಿಯಬೇಕು! ಮುಖ ತೊಳೆಯದೆ ಟೀ ಕುಡಿಯುವ ಅಭ್ಯಾಸ ನನಗಿಲ್ಲ. ಇಫ್ ಯು ಡೋಂಟ್ ಮೈಂಡ್ ಪ್ಲೀಸ್ ಕೀಪ್ ಇಟ್ ಎವೇ' ಎಂದು ಜಯಂತಿಯ ಮುಖ ನೋಡಿದರು.

ಜಯಂತಿ 'ಅದಕ್ಕೇನು? ಖಂಡಿತ ನಿಮಗೆ ಹೇಗೆ ಬೇಕೋ ಹಾಗೇ ಆಗಲಿ, ನೀವು ಮುಖ ತೊಳೆಯುವುದಾದರೆ ನಾನು ನಿಮ್ಮ ಕೈ ಹಿಡಿಯುತ್ತೇನೆ!' ಎಂದಳು. 'ಎಲ್ಲಿ ನಿಮ್ಮ ಬ್ರಷ್ ಇರುವ ಕಿಟ್?' ಎಂದು ಅದನ್ನು ಹುಡುಕುತ್ತಾ ಅದರೊಳಗಿಂದ ಬ್ರಷ್ ತೆಗೆದು ಪೇಸ್ಟು ಹಚ್ಚಿ ರಾಯರ ಕೈಗಿತ್ತಳು.

ರಾಯರು ನಿಧಾನವಾಗಿ ಬೆಡ್‌ನಿಂದ ಇಳಿದು ಬಾತ್‌ರೂಮಿಗೆ ಹೋಗಿ ಮುಖ ತೊಳೆದು ಬಂದರು. ಆಮೇಲೆ ಜಯಂತಿಯ ಅಡುಗೆ ಕೋಣೆಗೆ ನಿಧಾನವಾಗಿ ಬಂದು 'ಎಲ್ಲಿ ನಿನ್ನ ಟೀ?' ಎಂದು ಪ್ರಶ್ನಿಸಿದರು. ಜಯಂತಿ 'ಅದು ಈಗ ಸಪ್ಪೆ ಆಗಿರಬೇಕು' ಎಂದು ಬದಿಗಿಟ್ಟೆ, 'ಫ್ರೆಶ್ ಆಗಿ ಈಗ ಲೆಮನ್ ಟೀ ಮಾಡಿಕೊಡುತ್ತೇನೆ. ಅದು ವಾಂತಿಗೂ ಒಳ್ಳೆಯದು, ಆರೋಗ್ಯಕ್ಕೂ ಒಳ್ಳೆಯದು ಎನ್ನುವುದನ್ನು ಕೇಳಿದ್ದೇನೆ' ಎಂದಳು.

ರಾಯರು ಗ್ರೀನ್ ಟೀ ಕುಡಿದು ಒಂದು ನಿಟ್ಟುಸಿರು ಬಿಟ್ಟರು. 'ಅಬ್ಬ, ನೌ ಐ ಫೀಲ್ ಮಚ್ ಬೆಟರ್' ಎನ್ನುತ್ತಾ ಮಲಗುವ ಕೋಣೆಗೆ ಮರಳಿದರು. ಹಾಸಿಗೆಯಲ್ಲಿ ಉದ್ದಕ್ಕೂ ಬಿದ್ದುಕೊಂಡರು.

ಸುಮಾರು ಒಂಬತ್ತೂವರೆಯ ಹೊತ್ತಿಗೆ ರಾಜಾರಾಂ ಅವರು ಬಂದು, 'ಅಕ್ಕ ಡಾಕ್ಟರ್ ಕೊಟ್ಟ ಪ್ರಿಸ್ಕ್ರಿಪ್ಷನ್‌ನ ಔಷಧಗಳನ್ನು ಪೂರ್ತಿ ತಂದಿದ್ದೇನೆ. ಔಷಧಗಳ ಡೋಜು ಆ ಪ್ರಿಸ್ಕ್ರಿಪ್ಷನ್‌ನಲ್ಲಿದೆ' ಎಂದು ಎಲ್ಲವನ್ನೂ ಜಯಂತಿಯ ಕೈಯಲ್ಲಿಟ್ಟು, 'ನಿಮ್ಮ ಅಣ್ಣ ನಿದ್ದೆ ಹೋಗಿರುವ ಹಾಗಿದೆಯಲ್ಲ?' ಎಂದರು.

'ಹೌದು. ನಾನು ಈಗ ಅವರನ್ನು ಎಬ್ಬಿಸಬೇಕು. ಟೀ ಕೊಟ್ಟು ಮಲಗಿಸಿದ್ದೇನೆ. ಅವರು ತಿಂಡಿ ತಿಂದು ಮಲಗುವ ತನಕ ನೀವು ಇಲ್ಲಿದ್ದರೆ ಉಪಕಾರವಾಗುತ್ತಿತ್ತು' ಎಂದಳು ಜಯಂತಿ. ರಾಜಾರಾಂ 'ಸರಿ' ಎಂದು ರಾಯರು ಮಲಗಿದ ಕೋಣೆಯಾಚೆ ನಡೆದರು.

(ಸಶೇಷ)